**ದಿಃ 24-03-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ MGK ವಕೀಲರಿಂದ**

7. ನಿಪಿಃ1 ರಂತೆ ನಾನು ಜುಲೈ 2024 ರಲ್ಲಿ 11 ತಿಂಗಳ ನಂತರ ಅರ್ಜಿಯ ಸ್ವತ್ತನ್ನು ಬಿಟ್ಟುಕೊಡುತ್ತೇನೆ ಎಂದು ಒಪ್ಪಿ ರುತ್ತೇನೆ ಎಂದರೆ ಸರಿ. ಅರ್ಜಿದಾರರು ನನಗೆ ಆ ರೀತಿಯಾಗಿ ಅರ್ಜಿಯ ಸ್ವತ್ತನ್ನು ಬಿಟ್ಟುಕೊಡಲು ಕೇಳಿದಾಗ ನಾನು ಸದರಿಯವರ ವಿರುದ್ಧ ಅಸಲು ದಾವಾ ಸಂಖ್ಯೆ 1044/2024 ನ್ನು ಪ್ರತಿಬಂಧಕಾಜ್ಞೆ ಕೋರಿಕೆ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಸದರಿ ದಾವೆಯನ್ನು ಮುಂದುವರಿಸದೇ ಅದನ್ನು ಹಿಂಪಡೆದಿರುತ್ತೇನೆ ಎಂದರೆ ಸರಿ. ಅರ್ಜಿದಾರರು ವಿಧವೆಯಾಗಿದ್ದು ಮನೆಯಲ್ಲಿ ಒಬ್ಬರೇ ಇರುತ್ತಾರೆ ಎಂದು ನನಗೆ ಅರ್ಜಿಯ ಸ್ವತ್ತನ್ನು ಬಾಡಿಗೆಗೆ ಪಡೆದ 6 ತಿಂಗಳ ನಂತರ ತಿಳಿಯಿತು. ಅರ್ಜಿದಾರರಿಗೆ ಅರ್ಜಿಯ 8ನೇ ಪ್ಯಾರಾದಲ್ಲಿ ಹೇಳಿರುವಂತ ಖಾಯಿಲೆಗಳು ಇವೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅರ್ಜಿದಾರರಿಗೆ ಸದರಿ ಖಾಯಿಲೆಗಳು ಇದ್ದು, ಅವರಿಗೆ ಇನ್ನೊಬ್ಬ ವ್ಯಕ್ತಿಯ ಸಹಾಯವು ಬೇಕಾಗುತ್ತದೆ ಎಂದು ವೈದ್ಯರೂ ಸಹ ಸೂಚಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

8. ನಾನು 11 ತಿಂಗಳಿಗೆ ಅರ್ಜಿಯ ಸ್ವತ್ತನ್ನು ಬಾಡಿಗೆಗೆ ಬೇಕೆಂದು ಪಡೆದಿರುತ್ತೇನೆ ಎಂದರೆ ಸಾಕ್ಷಿಯು ನಾನು ಅರ್ಜಿಯ ಸ್ವತ್ತನ್ನು 5 ವರ್ಷಗಳಿಗೆ ಬೇಕೆಂದು ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನಗೆ ಅರ್ಜಿಯ ಸ್ವತ್ತು 5 ವರ್ಷಗಳಿಗೆ ಬೇಕು ಎಂದು ಅರ್ಜಿದಾರರಿಗೆ ಲಿಖಿತವಾಗಿ ಕೊಟ್ಟಿರುವುದಿಲ್ಲ ಎಂದರೆ ಸರಿ. ನಿಪಿಃ1 ರಲ್ಲಿ 11 ತಿಂಗಳ ಕರಾರು ಮುಗಿದ ನಂತರ ಅದು ಪುನಃ 5 ವರ್ಷಗಳಿಗೆ ಮುಂದುವರೆಯುವ ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ಅರ್ಜಿದಾರರು

ತಯಾರಿಸಿದ ಕಾರಣ ಇರುವುದಿಲ್ಲ ಎಂದು ನುಡಿಯುತ್ತಾರೆ. ಅರ್ಜಿಯ ಸ್ವತ್ತಿನ ಅಕ್ಕಪಕ್ಕದಲ್ಲಿ ಬೇರೆ ವಾಸದ ಮನೆಗಳು ಇವೆ ಎಂದರೆ ಸರಿ. ನಾನು ಸದರಿ ಮನೆಗಳು ಬಾಡಿಗೆಗೆ ಸಿಗುವ ಬಗ್ಗೆ ಯಾವುದೇ ಚೌಕಾಶಿ ಮಾಡಿರುವುದಿಲ್ಲ. ನಾನು ಆ ರೀತಿಯಾಗಿ ಯಾವುದೇ ಬೇರೆ ಮನೆಯನ್ನು ಬಾಡಿಗೆಗೆ ಹುಡುಕದೇ ಅರ್ಜಿದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಅರ್ಜಿಯ ಸ್ವತ್ತಿನಲ್ಲಿಯೇ ಬಾಡಿಗೆದಾರರಾಗಿ ಮುಂದುವರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ರೀತಿಯಾಗಿ ಹುಡುಕಿದರೆ, ನನಗೆ ಬೇರೆ ಮನೆ ಬಾಡಿಗೆಗೆ ಸಿಗುತ್ತಿತ್ತು ಎಂದರೆ ಸಾಕ್ಷಿಯು ಸಿಗುತ್ತಿತ್ತು ಅಥವಾ ಸಿಗದೇ ಇರಬಹುದಿತ್ತು ಎಂದು ನುಡಿಯುತ್ತಾರೆ. ನಾನು ಆ ರೀತಿಯಾಗಿ ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ ಎಂದರೆ ಸರಿ. ನನಗೆ ಅರ್ಜಿದಾರರು ವಿಧವೆಯಾಗಿದ್ದು, ಅವರಿಗೆ ವಯಸ್ಸಿನ ಹಾಗೂ ಇತರೆ ಖಾಯಿಲೆಗಳು ಇರುವ ಬಗ್ಗೆ ಅರ್ಜಿಯ ಸ್ವತ್ತನ್ನು ಬಾಡಿಗೆಗೆ ಪಡೆದುಕೊಳ್ಳುವ ಮೊದಲೇ ತಿಳಿದಿತ್ತು ಎಂದರೆ ಸರಿಯಲ್ಲ. ನ್ಯಾಯಾಲಯದ ಮೂಲಕ ಅರ್ಜಿಯ ಸ್ವತ್ತನ್ನು ಅರ್ಜಿದಾರರಿಗೆ ವಹಿಸಿಕೊಡದಿದ್ದಲ್ಲಿ ಅರ್ಜಿದಾರರಿಗೆ ತೊಂದರೆಯಾಗುತ್ತದೆ ಆದರೆ ನನಗೆ ಬೇರೆ ಮನೆ ಬಾಡಿಗೆಗೆ ಸಿಗಬಹುದು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ವಯಸ್ಸಾಗಿದ್ದು, ನಾನು ಸದರಿ ಅರ್ಜಿಯ ಸ್ವತ್ತನ್ನು ದುರುದ್ದೇಶದಿಂದ ಖಬಳಿಸುವುದಕ್ಕೋಸ್ಕರ ಅದನ್ನು ಅರ್ಜಿದಾರರಿಗೆ ಬಿಟ್ಟುಕೊಡುತ್ತಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೇ ಸರಿ ಇದೆ.**

**Sd/-**
**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**